ಶ್ರೀ ಡಿ. ಎಂ. ಗೋವಿಂದರಾಜು ಅವರು.—ಸರ್ವೆ ಮರದ ಸೌದೆಗೆ ಕಂಟ್ರೋಲ್ ಇಡಲು ಕಾರಣವೇನು?

ಶ್ರೀ ಎಚ್. ಸಿದ್ದವೀರಪ್ಪನವರು.—ಸೌದೆಗೆ ಏನೂ ಅಭಾವವಿಲ್ಲವೆಂದು ಈ ಹತೋಟಿಯನ್ನು ಸಡಿಲ ಮಾಡುವವರೆಗೆ ಇದರ ಮೇಲಿನ ಹತೋಟಿ ಆಜ್ಞೆಯನ್ನು ತೆಗೆಯಲು ಅವಕಾಶವಿಲ್ಲ.

ಶ್ರೀ ಡಿ. ಎಂ. ಗೋವಿಂದರಾಜು ಅವರು.—ಸರ್ವೆ ಮರಗಳನ್ನು 6 ವರ್ಷದವರೆಗೂ ಕಡಿಯಕೂಡದೆಂದು ಸರ್ಕಾರದ ಆಜ್ಞೆ ಇದೆಯೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಅದು ಪೂರ್ತಿ ಬರಬೇಕಾಗಿದ್ದರೆ 8–10 ವರ್ಷ ಕಾಲ ಬೇಕು.

ಶ್ರೀ ಎ. ವಿ. ನರಸಿಂಹರೆಡ್ಡಿಯವರು (ಬೆಂಗಳೂರು ದಕ್ಷಿಣ).—ಈಗ ಸರ್ವೆ ಮರಗಳನ್ನು 6 ವರ್ಷಕ್ಕೆ ಮುಂಚೆ ಕಡಿಯಕೂಡದೆಂದು ಆಜ್ಞೆ ಇದೆಯೇ?

ಶ್ರೀ ಎಚ್. ಸಿದ್ದವೀರಪ್ಪನವರು.—ನೋಟೀಸ್.

ಶ್ರೀ ಎ. ವಿ. ನರಸಿಂಹರೆಡ್ಡಿಯವರು.—ಇದನ್ನು ಹತ್ತು ವರ್ಷಗಳಿಗೆ ಏರಿಸುವ ಆಲೋಚನೆ ಮಾಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪನವರು.—ಪೂರ್ತಿ ಬರುವ ತನಕ ಕಡಿಯಬಾರದೆಂಬುದನ್ನು ಆಲೋಚನೆ ಮಾಡಲಾಗುತ್ತದೆ.

ಶ್ರೀ ಎ. ವಿ. ನರಸಿಂಹರೆಡ್ಡಿಯವರು.—ಈ ಸರ್ವೆ ಸೌದೆ ಎಲ್ಲಿಗೆ ಸರಬರಾಯಿ ಆಗುತ್ತಿದೆ?

ಶ್ರೀ ಎಚ್. ಸಿದ್ದವೀರಪ್ಪನವರು.—ನಗರ ಪ್ರದೇಶಗಳಿಗೆ. I may also submit at this moment that the Government intend constituting a Committee to solve the fuel problem, particularly in Urban areas.

Audit of Accounts of Central Food Reserve Depot.

Q—463. **Sri Y. M. CHANDRASEKHARIAH** (Kadur).—

Will the Government be pleased to state :—

(*a*) whether the accounts of Central Food Reserve Depot at Kadur in Chikmagalur District have been audited ;

(*b*) whether it has come to their notice that the cash of the said Depot has been misappropriated ;

(*c*) the action taken in respect of the said offence ?

A.—**Sri H. SIDDAVEERAPPA** (Minister for Home Affairs and Agriculture).—

(*a*) The accounts have been audited every year and they have been audited up to end of June 1951.

(*b*) No such instance has been reported till today.

(*c*) Does not arise.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಕಡೂರಿನಲ್ಲಿ ಒಂದು ಆಹಾರದ ರಿಜರ್ವ್ ಡಿಪೋ ಇರುವುದು ತಮಗೆ ಗೊತ್ತಿದೆಯೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಗೊತ್ತಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಆ ಡಿಪೋವಿನ ಲೆಕ್ಕ ಪತ್ರಗಳು ಆಡಿಟ್ ಆಗದಿರುವುದು ತಮಗೆ ಗೊತ್ತಿದೆಯೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಆ ಲೆಕ್ಕ ಪತ್ರಗಳನ್ನೆಲ್ಲಾ ಆಡಿಟ್ ಮಾಡಲಾಗಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಹಾಗೆ ಆಡಿಟ್ ಮಾಡಲಾದ ಲೆಕ್ಕ ಪತ್ರಗಳಿಂದ ಹಣ ದುರುಪಯೋಗವಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಜೂನ್ 1951ರ ತನಕ ಆಡಿಟ್ ಆಗಿರುವ ಲೆಕ್ಕ ಪತ್ರಗಳಲ್ಲಿ ಸರ್ಕಾರದ ಪರಿಗೆ ಯಾವ ನ್ಯೂನತೆಗಳೂ ಕಂಡುಬಂದಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—1951ನೆಯ ಇಸವಿ ಲೆಕ್ಕ ಪತ್ರಗಳನ್ನು ಆಡಿಟ್ ಮಾಡಿ ಸಿದ್ದರಲ್ಲಿ ಹಣ ಖೋತಾ ಬಂದಿರುತ್ತದೆಯೆಂದು ಸರ್ಕಾರಕ್ಕೆ ವರದಿ ಬಂದಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪನವರು.—'ವರದಿ ಬಂದಿಲ್ಲ' ಎಂದು ಉತ್ತರದಲ್ಲೇ ತಿಳಿಸಲಾಗಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—1951ನೆಯ ಇಸವಿ ಲೆಕ್ಕ ಪತ್ರಗಳಲ್ಲಿ ವ್ಯತ್ಯಾಸಗಳಿರುವುದರಿಂದ ಅವುಗಳನ್ನು ಪುನಃ ಪರಿಶೀಲನೆಗೆ ಆಜ್ಞೆ ಮಾಡಲಾಗುತ್ತದೆಯೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಅಂಥ ಅಗತ್ಯ ಕಂಡು ಬಂದರೆ ಖಂಡಿತ ಮಾಡಲಾಗುತ್ತದೆ.

Mr. SPEAKER.—Question hour is over.

1 P. M.

QUESTIONS FOR ANSWERS ON THE DAY

(Not taken up)

Restoration of Tanks in Bangalore District.

Q.—173. **Sri K. V. BYRE GOWDA** (Bangalore North).—

Will the Government be pleased to state :—

(*a*) the number of major and minor tanks in Bangalore District (talukwar information may kindly be furnished);

(*b*) the number of tanks taken up for restoration (talukwar information may kindly be furnished) ;

(*c*) the number of tanks asked for restoration (talukwar information may kindly be furnished) ;

(*d*) the reason for the delay ?